ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 22 ಎಸಿಎಂ (2) 2013-14

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 28-05-2013.

**-:: ಪ್ರವೇಶಾಧಿಸೂಚನೆ ::-**

**ವಿಷಯ:-** 2013-14ನೇ ಸಾಲಿನಲ್ಲಿ ಐಟಿಐ ವಿದ್ಯಾರ್ಥಿಗಳಿಗೆ 2ನೇ ವರ್ಷ / 3ನೇ ಸೆಮಿಸ್ಟರ್ ಡಿಪ್ಲೋಮಾಗೆ ಲ್ಯಾಟರಲ್ ಎಂಟ್ರಿ ಸ್ಕೀಂ ಮುಖಾಂತರ ಖಾಸಗಿ ಪಾಲಿಟೆಕ್ನಿಕ್‌ಗಳಿಗೆ ಪ್ರವೇಶ ನೀಡುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಆದೇಶ ಸಂ. ಇಡಿ/161/ಟಿಪಿಇ/2011, ದಿ:15-07-2011.
2. ಸರ್ಕಾರದ ಆದೇಶ ಸಂ. ಇಡಿ 145 ಟಿಪಿಇ 2012, ದಿ:16-06-2012.
3. ಸರ್ಕಾರದ ಆದೇಶ ಸಂ.ಇಡಿ 169 ಟಿಪಿಇ 2012, ದಿನಾಂಕ: 19-07-2012.

-000000000-

2013-14ನೇ ಸಾಲಿಗೆ ಸರ್ಕಾರದಿಂದ ಹಾಗೂ ಎ.ಐ.ಸಿ.ಟಿ.ಇ ಯಿಂದ ಮಾನ್ಯತೆ ಪಡೆದ ರಾಜ್ಯದಲ್ಲಿನ ಪಾಲಿಟೆಕ್ನಿಕ್‌ಗಳಲ್ಲಿ ಐ.ಟಿ.ಐ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೆ 2ನೇ ವರ್ಷ / 3ನೇ ಸೆಮಿಸ್ಟರ್ ಡಿಪ್ಲೋಮಾಗೆ ಲ್ಯಾಟರಲ್ ಎಂಟ್ರಿ ಸ್ಕೀಂ ಮುಖಾಂತರ ಪ್ರವೇಶಕ್ಕೆ ಎ.ಐ.ಸಿ.ಟಿ.ಇ ಯ ಪ್ರವೇಶ ಮಾರ್ಗಸೂಚಿ ಪ್ರಕಾರ ಉಲ್ಲೇಖ(1)ರಲ್ಲಿನ ಸರ್ಕಾರದ ಆದೇಶದಲ್ಲಿ ಅನುಮತಿ ನೀಡಲಾಗಿದೆ.

ಈ ಕೆಳಗೆ ನಮೂದಿಸಲಾದ ಅನುಬಂಧದಲ್ಲಿನಂತೆ 02 ವರ್ಷಗಳ ಐ.ಟಿ.ಐ ಟ್ರೇಡ್‌ನ್ನು ತೇರ್ಗಡೆ ಹೊಂದಿದ್ದಲ್ಲಿ ಅದು ಮೊದಲನೇ ವರ್ಷದ ಡಿಪ್ಲೋಮಾ ಕೋರ್ಸಿಗೆ ಸಮಾನಾಂತರವೆಂದು ಪರಿಗಣಿಸಲಾಗಿದ್ದು, ಹಾಗೂ ಸದರಿ ಅಭ್ಯರ್ಥಿಗಳಿಗೆ 2ನೇ ವರ್ಷ / 3ನೇ ಸೆಮಿಸ್ಟರ್ ಡಿಪ್ಲೋಮಾಗೆ ನೇರ ಪ್ರವೇಶ ನೀಡಲು ಪಾಲಿಟೆಕ್ನಿಕ್‌ಗಳ ಕೋರ್ಸುಗಳಿಗೆ ಎ.ಐ.ಸಿ.ಟಿ.ಇ ಮತ್ತು ಸರ್ಕಾರ ನಿಗಧಿಪಡಿಸಿದ ಇಂಟೇಕ್‌ಗೆ ಹೆಚ್ಚುವರಿಯಾಗಿ (Over and above Intake) ಶೇ.20 ರಷ್ಟು ಸ್ಥಾನಗಳನ್ನು ಕಾಯ್ದಿರಿಸಲಾಗಿದೆ.

**ಅನುಬಂಧ**

| Sl. No | ITI Trades | Duration in years | Equivalent Diploma Course | Bridge Course subjects (Common to all Trades) |
|---|---|---|---|---|
| (1) | (2) | (3) | (4) | (5) |
| 1 | Attendant Operator ( Chemical Plant ) | 2 | Chemical | **3rd Semester:**<br>1. Applied Mathematics-I<br>2. English Communication<br>**4th Semester:**<br>1. Applied Mathematics-II |
| 2 | Draftsman(Civil) | 2 | Civil/Environmental/PHE/Construction Tech./Water Tech./Civil Draftsmanship | |
| 3 | Draftsman (Mechanical) | 2 | Mechanical/ WSM/ MTT/ IT/ HPT | |
| 4 | Electrician | 2 | E&E/E&C | |
| 5 | Electronic Mechanic | 2 | E&C/E&E | |
| 6 | Electroplater | 2 | E&E/ Chemical | |
| 7 | Fitter | 2 | Mechanical/ WSM/ MTT/ IT/ HPT | |

| | | | | |
|---|---|---|---|---|
| 8 | Instrument Mechanic | 2 | Mechanical/ WSM/ MTT/ IT/ HPT | **3rd Semester:**<br>1. Applied Mathematics-I<br>2. English Communication<br>**4th Semester:**<br>1. Applied Mathematics-II |
| 9 | Surveyor | 2 | Civil/ Environmental/ PHE/ Construction Tech./Water Tech./Civil Draftsmanship | |
| 10 | Instrument Mechanic ( Chemical Plant) | 2 | Chemical | |
| 11 | Lab Assistant ( Chemical Plant) | 2 | Chemical | |
| 12 | Machinist | 2 | Mechanical/ WSM/ MTT/ IT/ HPT | |
| 13 | Machinist(Grinder) | 2 | Mechanical/ WSM/ MTT/ IT/ HPT | |
| 14 | Maintenance Mechanic (Chemical Plant) | 2 | Chemical | |
| 15 | Mechanic (Motor Vehicle) | 2 | Automobile/Mechanical/ WSM/ MTT/ IT/ HPT | |
| 16 | Mechanic (Refrigeration and Air conditioning) | 2 | HPT,/Mechanical | |
| 17 | Mechanic (Radio & TV) | 2 | E&C | |
| 18 | Mechanic (Machine Tool Maintenance) | 3 | Mechanical/ MTT | |
| 19 | Turner | 2 | Mechanical/ MTT | |
| 20 | Information Technology & Electronics Systems Maintenance (IT &ESM) | 2 | E&C/CS/ IS/ EI&C | |
| 21 | Tool and Die Making (Press tools, Jigs and Fixtures) | 3 | Mechanical/MTT/ WSM | |
| 22 | Production & Manufacturing | 2 | MTT/ WSM/Mechanical | |
| 23 | Automobile | 2 | Automobile | |
| 24 | Electrical | 2 | E&E | |
| 25 | Electronics | 2 | E&C | |
| 26 | Refrigeration and Air conditioning | 2 | HPT | |
| 27 | Fabrication | 2 | Mechanical/MTT/ WSM | |

ಮೇಲ್ಕಂಡ ಅನುಬಂಧದಲ್ಲಿ ನಮೂದಿಸಿರುವ ಐ.ಟಿ.ಐ ಟ್ರೇಡ್‌ನಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೆ ಕಾಲಂ ನಂ.(4)ರಲ್ಲಿ ನಮೂದಿಸಿರುವ ಡಿಪ್ಲೋಮಾ ಕೋರ್ಸುಗಳಿಗೆ ನೇರವಾಗಿ 2ನೇ ವರ್ಷ / 3ನೇ ಸೆಮಿಸ್ಟರ್ ಡಿಪ್ಲೋಮಾಗೆ ಪ್ರವೇಶ ನೀಡಬಹುದಾಗಿರುತ್ತದೆ. ಈ ಕೋಟಾದಡಿ ಪ್ರವೇಶ ಪಡೆದ ಅಭ್ಯರ್ಥಿಗಳು ಮೇಲ್ಕಂಡ ಅನುಬಂಧದ ಕಾಲಂ ನಂ.(05) ರಲ್ಲಿ ನಮೂದಿಸಿರುವಂತೆ 3ನೇ ಸೆಮಿಸ್ಟರ್‌ನಲ್ಲಿ 02

ವಿಷಯಗಳನ್ನು ಮತ್ತು 4ನೇ ಸೆಮಿಸ್ಟರ್‌ನಲ್ಲಿ 01 ವಿಷಯವನ್ನು ಹೆಚ್ಚುವರಿಯಾಗಿ (Bridge Course) ಕಡ್ಡಾಯವಾಗಿ ವ್ಯಾಸಂಗ ಮಾಡಿ ಉತ್ತೀರ್ಣರಾಗುವ ಷರತ್ತಿಗೊಳಪಟ್ಟಿರುತ್ತದೆ.

ಸರ್ಕಾರದಿಂದ ಹಾಗೂ ಎಐಸಿಟಿಇಯಿಂದ ಮಾನ್ಯತೆ ಪಡೆದ ರಾಜ್ಯದಲ್ಲಿನ ಎಲ್ಲಾ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಉಲ್ಲೇಖ(1) ನಮೂದಿಸಿರುವ ಸರ್ಕಾರದ ಆದೇಶದಂತೆ ರಾಜ್ಯದಲ್ಲಿನ ಖಾಸಗಿ ಪಾಲಿಟೆಕ್ನಿಕ್‌ಗಳ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ ಅನುದಾನರಹಿತ ಕೋರ್ಸುಗಳಿಗೆ ಡಿಪ್ಲೋಮಾ ಪ್ರವೇಶಕ್ಕೆ ಕೆಳಕಂಡ ಮಾರ್ಗಸೂಚಿಯನ್ನು ನೀಡಲಾಗಿದೆ.

ಸಂಬಂಧಿಸಿದ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಈ ನಿಯಮಗಳು ಮತ್ತು ಮಾರ್ಗಸೂಚಿಯಲ್ಲಿನ ಅಂಶಗಳನ್ನು ಕ್ರಮವಾಗಿ ಅನುಸರಿಸಿ ಅರ್ಹ ಅಭ್ಯರ್ಥಿಗಳಿಗೆ ಮೇಲ್ಕಂಡಂತೆ ಡಿಪ್ಲೋಮಾ ಕೋರ್ಸ್‌ಗಳಿಗೆ **ದಿನಾಂಕ:29-06-2013ರ** ಒಳಗೆ ಪ್ರವೇಶ ನೀಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ. ಅಂತಿಮ ದಿನಾಂಕದ ನಂತರ ಮತ್ತು ನಿಯಮಗಳನ್ನು ಮೀರಿ ಮಾಡಿಕೊಂಡಂತಹ ಪ್ರವೇಶಗಳನ್ನು ಅನುಮೋದಿಸಲಾಗುವುದಿಲ್ಲ ಹಾಗೂ ಮುಂದೆ ಉದ್ಭವಿಸಬಹುದಾದ ಪರಿಣಾಮಗಳಿಗೆ ಪ್ರಿನ್ಸಿಪಾಲರೇ ನೇರ ಜವಾಬ್ದಾರರಾಗುತ್ತಾರೆ.

**1. ಖಾಸಗಿ ಡಿಪ್ಲೋಮಾ ಪ್ರವೇಶಕ್ಕೆ ಇರಬೇಕಾದ ಅರ್ಹತೆ :**

**ಅಭ್ಯರ್ಥಿಯು ಭಾರತೀಯ ಪ್ರಜೆಯಾಗಿರಬೇಕು; ಮತ್ತು**

ಅ) ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಕರ್ನಾಟಕದಲ್ಲಿ 02 ವರ್ಷಗಳ ಐ.ಟಿ.ಐ ವ್ಯಾಸಂಗ ಮಾಡಿ ಉತ್ತೀರ್ಣರಾಗಿರಬೇಕು.

ಅ) ಅಭ್ಯರ್ಥಿಯು ಕರ್ನಾಟಕದಲ್ಲಿ 1ನೇ ತರಗತಿಯಿಂದ 02 ವರ್ಷಗಳ ಐ.ಟಿ.ಐ [ಎಸ್.ಎಸ್.ಎಲ್.ಸಿ (10ನೇ ತರಗತಿ) ಪರೀಕ್ಷೆಯನ್ನೊಳಗೊಂಡು] ವ್ಯಾಸಂಗದವರೆಗೆ 05 ವರ್ಷಗಳ ವ್ಯಾಸಂಗ ಮಾಡಿರಬೇಕು.

**2. ಕರ್ನಾಟಕ ಅಭ್ಯರ್ಥಿಯೆಂದು ಪರಿಗಣಿಸಲು:-**

1. ಅಭ್ಯರ್ಥಿಯು ಸರ್ಕಾರದಿಂದ ಮಾನ್ಯತೆ ಪಡೆದ ಕರ್ನಾಟಕದಲ್ಲಿನ ಯಾವುದೇ ಶಿಕ್ಷಣಾಲಯದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯನ್ನೊಳಗೊಂಡಂತೆ 02 ವರ್ಷಗಳ ಐ.ಟಿ.ಐ ವ್ಯಾಸಂಗದವರೆಗೆ ಕನಿಷ್ಠ 5 ವರ್ಷಗಳ ಕಾಲ ವ್ಯಾಸಂಗ ಮಾಡಿರಬೇಕು. (ಈ ಬಗ್ಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಅಥವಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಂದ ದೃಢೀಕರಿಸಲ್ಪಟ್ಟ ವ್ಯಾಸಂಗ ಪ್ರಮಾಣ ಪತ್ರ ಪಡೆದು ಪ್ರವೇಶ ಸಮಯದಲ್ಲಿ ಹಾಜರುಪಡಿಸಬೇಕು.)
2. ಅಭ್ಯರ್ಥಿಯು ಮೀಸಲಾತಿಯ ಸೌಲಭ್ಯ ಪಡೆಯಲು, ಅಭ್ಯರ್ಥಿ ಹಾಗೂ ಅಭ್ಯರ್ಥಿಯ ಪಾಲಕರು ಕರ್ನಾಟಕದ ಶಾಶ್ವತ ನಿವಾಸಿಯಾಗಿರಬೇಕು.
3. ಹೊರ ರಾಜ್ಯದಿಂದ ಕರ್ನಾಟಕ ರಾಜ್ಯಕ್ಕೆ ವಲಸೆ ಬಂದಿರುವ ಅಭ್ಯರ್ಥಿಗಳು/ಪಾಲಕರು ಮೀಸಲಾತಿಯನ್ನು ಕರ್ನಾಟಕದಲ್ಲಿ ಪಡೆಯಲು ಅರ್ಹರಾಗಿರುವುದಿಲ್ಲ.
4. ಶಾಶ್ವತ ನಿವಾಸಿ ಎಂದು ದೃಢಪಡಿಸಲು ಅಭ್ಯರ್ಥಿಯು ಆಯಾ ಪ್ರದೇಶದ ತಹಶೀಲ್ದಾರ್‌ರವರ ಕಛೇರಿಯಿಂದ ಡೊಮಿಸಲ್ ಸರ್ಟಿಫಿಕೇಟನ್ನು ಪಡೆದು ಸಲ್ಲಿಸಬೇಕು. ಡೊಮಿಸಲ್ ಪ್ರಮಾಣ ಪತ್ರದಲ್ಲಿ ಅಭ್ಯರ್ಥಿಯ ಪೂರ್ಣ ವಿಳಾಸ (ಮನೆ ನಂಬರ್ ಸಹಿತ) ವನ್ನು ಹೊಂದಿರತಕ್ಕದ್ದು.

**3. ಪ್ರವೇಶ ಸಂಖ್ಯೆಯ ಮಿತಿಯೊಳಗೆ (ಇನ್‌ಟೇಕ್) ಹಾಗೂ ಮಾನ್ಯತೆ ಪಡೆದ ಕೋರ್ಸಿಗೆ ಪ್ರವೇಶ ನೀಡುವ ಬಗ್ಗೆ:-**

2013-14ನೇ ಸಾಲಿನ ಪ್ರವೇಶವು ಎ.ಐ.ಸಿ.ಟಿ.ಇ ಮತ್ತು ಸರ್ಕಾರ ನಿಗಧಿಪಡಿಸಲಾಗಿರುವ ಕೋರ್ಸು ಮತ್ತು ಪ್ರವೇಶ ಸಂಖ್ಯೆಯ ಮಿತಿಯೊಳಗೆ ಇರತಕ್ಕದ್ದು. ಆದಾಗ್ಯೂ ಪಾಲಿಟೆಕ್ನಿಕ್‌ನ ಇನ್‌ಟೇಕ್ ನಿಗದಿಯಲ್ಲಿ

ಬದಲಾವಣೆ ಅಥವಾ ಮಾರ್ಪಾಡು ಆದ ಪಕ್ಷದಲ್ಲಿ ಪ್ರವೇಶ ಸಂಖ್ಯೆಯನ್ನು ಸರಿದೂಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ. ಸರ್ಕಾರದ ಆದೇಶ ಮತ್ತು ಎ.ಐ.ಸಿ.ಟಿ.ಇ.ಯ ಪೂರ್ವಾನುಮತಿ ಇಲ್ಲದ ಹೊಸ ಕೋರ್ಸುಗಳಿಗೆ ಪ್ರವೇಶ ಮತ್ತು ಪ್ರವೇಶ ಮರುಹೊಂದಾಣಿಕೆಗೂ ಅವಕಾಶವಿರುವುದಿಲ್ಲ. ಅಲ್ಲದೆ ನಿಯಮಗಳನ್ನು ಮೀರಿ ಪ್ರವೇಶ ಮಾಡಿಕೊಳ್ಳಲಾದ ಅಭ್ಯರ್ಥಿಗಳ ಪ್ರವೇಶಾನುಮೋದನೆಯನ್ನು ರದ್ದುಪಡಿಸಲಾಗುವುದಲ್ಲದೆ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲ. ಇದಕ್ಕೆ ಆಯಾ ಸಂಸ್ಥೆಯ ಪ್ರಿನ್ಸಿಪಾಲರು ಮತ್ತು ಆಡಳಿತ ಮಂಡಳಿಯವರೇ ಸಂಪೂರ್ಣ ಜವಾಬ್ದಾರರಾಗುತ್ತಾರೆ.

**4. ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದ ಎಲ್ಲಾ ಅಗತ್ಯ ಮೂಲ ದಾಖಲೆಗಳು**

a. 02 ವರ್ಷಗಳ ಐ.ಟಿ.ಐ ಅಂಕಪಟ್ಟಿ & ಪ್ರಮಾಣ ಪತ್ರ.

b. ಎಸ್.ಎಸ್.ಎಲ್.ಸಿ/ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.

c. ಮೂಲ ವರ್ಗಾವಣೆ ಪ್ರಮಾಣ ಪತ್ರ.

d. ಕರ್ನಾಟಕದಲ್ಲಿ 01ನೇ ತರಗತಿಯಿಂದ 02 ವರ್ಷಗಳ ಐ.ಟಿ.ಐ ವರೆಗೆ ಕನಿಷ್ಠ 05 ವರ್ಷ ವ್ಯಾಸಂಗ ಮಾಡಿದ ಬಗ್ಗೆ ವ್ಯಾಸಂಗ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಅಥವಾ ಉಪ ನಿರ್ದೇಶಕರು ಇವರಿಂದ ಧೃಡೀಕರಿಸಿರಬೇಕು.

e. 01ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಬಗ್ಗೆ ವ್ಯಾಸಂಗ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಅಥವಾ ಉಪ ನಿರ್ದೇಶಕರು ಇವರಿಂದ ಧೃಡೀಕರಿಸಿರಬೇಕು. ಹಾಗೂ ಕನ್ನಡ ಮಾಧ್ಯಮ / ಗ್ರಾಮೀಣ ಕೋಟಾದಡಿ ಪ್ರವೇಶ ಬಯಸುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಮಾಣ ಪತ್ರವನ್ನು ಸಲ್ಲಿಸುವುದು. (ಗ್ರಾಮೀಣ ಕೋಟಾದಡಿ ಪ್ರವೇಶ ಬಯಸುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು **"ಪರಿಶೀಲನಾ ಪ್ರಮಾಣ ಪತ್ರ"** ಸಲ್ಲಿಸತಕ್ಕದ್ದು).

f. ಮೀಸಲಾತಿಯಡಿ ಕ್ಲೇಮು ಮಾಡುವ ಅಭ್ಯರ್ಥಿಗಳು ಮೂಲ ಜಾತಿ ಪ್ರಮಾಣ ಪತ್ರವನ್ನು ಮತ್ತು ಆದಾಯ ಪ್ರಮಾಣ ಪತ್ರವನ್ನು ನೋಡಲ್ ಸೆಂಟರ್‌ಗಳಲ್ಲಿ ಪ್ರವೇಶ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು. ಮೀಸಲಾತಿ/ಆದಾಯ ಪ್ರಮಾಣ ಪತ್ರ ಸಲ್ಲಿಸದೇ ಇರುವ ಅಭ್ಯರ್ಥಿಗಳು ನಿಯಮಗಳ ಪ್ರಕಾರ ಪ್ರವೇಶಕ್ಕೆ ಇರಬೇಕಾದ ಇತರೇ ಅರ್ಹತೆಗಳನ್ನು ಪೂರೈಸಿದ್ದಲ್ಲಿ ಸಾಮಾನ್ಯ ಗುಂಪಿನಡಿ ಪರಿಗಣಿಸಲಾಗುವುದು

g. ವೈದ್ಯಕೀಯ ಪ್ರಮಾಣ ಪತ್ರವನ್ನು ನೊಂದಾಯಿಸಿದ ಅಧೀಕೃತ ವೈದ್ಯರಿಂದ ಪಡೆದು ಸಲ್ಲಿಸಬೇಕು.

h. ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 04 ಭಾವಚಿತ್ರಗಳು.

2. **ಕರ್ನಾಟಕೇತರ ಎಸ್.ಎಸ್.ಎಲ್.ಸಿ/ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು ಕಾರ್ಯದರ್ಶಿಯವರು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು-560 001 ಇವರಿಂದ ನೀಡಲ್ಪಟ್ಟ ಅರ್ಹತಾ ಪ್ರಮಾಣ ಪತ್ರ (Eligibility Certificate)**
3. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಪ್ರವರ್ಗ-1 ಹಾಗೂ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಕಡ್ಡಾಯವಾಗಿ ನಿಗಧಿತ ನಮೂನೆಯಲ್ಲಿನ ಜಾತಿ ಹಾಗೂ ಆದಾಯ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

**5. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಇತರೇ ಮೀಸಲಾತಿ ಗುಂಪಿನ ಅಭ್ಯರ್ಥಿಗಳ ಪ್ರವೇಶದ ಬಗ್ಗೆ ಸೂಚನೆಗಳು :-**

1) ಸರ್ಕಾರದ ಆದೇಶ ಸಂಖ್ಯೆ: ಇಡಿ 114 ಟಿಪಿಇ 87 ದಿನಾಂಕ: 20/7/1987ರ ನಿಯಮ 5(2ಎ)ರಲ್ಲಿ ತಿಳಿಸಿರುವಂತೆ, ಕರ್ನಾಟಕ ಅಭ್ಯರ್ಥಿಗಳಿಗೆ ಮೀಸಲಾದ **ಶೇಕಡ 80** ಸ್ಥಾನಗಳಲ್ಲಿ ಕನಿಷ್ಠ **ಶೇ.20**ರಷ್ಟು ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು **ಶೇ.5**ರಷ್ಟು ಪರಿಶಿಷ್ಟ ಪಂಗಡ (ಎಸ್.ಟಿ) ಅಭ್ಯರ್ಥಿಗಳಿಗೂ ಮೀಸಲಾಗಿರಿಸತಕ್ಕದ್ದು. ಈ ಮೀಸಲಾತಿಯ ಅಭ್ಯರ್ಥಿಗಳು ಸೂಕ್ತ ಸಂಖ್ಯೆಯಲ್ಲಿ ಬಾರದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡಿರುವ ಕ್ರಮದಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ (ಉದಾ: ಪತ್ರಿಕಾ ಪ್ರಕಟಣೆ ಇತ್ಯಾದಿ)

ನಿರ್ದೇಶನಾಲಯಕ್ಕೆ ಮುಂಚಿತವಾಗಿ ಲಿಖಿತ ರೂಪದಲ್ಲಿ ತಿಳಿಸಿ, ನಿರ್ದೇಶಕರ ಪೂರ್ವಾನುಮತಿ ಪಡೆದು ಸಾಮಾನ್ಯ ವರ್ಗದ ಕರ್ನಾಟಕದ ಅಭ್ಯರ್ಥಿಗಳಿಗೆ ಪ್ರವೇಶ ನೀಡಬಹುದಾಗಿದೆ. ಆದಾಗ್ಯೂ, ಇದನ್ನೇ ಉದಾಹರಣೆಯಾಗಿ ತೆಗೆದುಕೊಂಡು ಸಾಮಾನ್ಯ ವರ್ಗದ ಕರ್ನಾಟಕದ ಅಭ್ಯರ್ಥಿಗಳಿಗೆ ಪ್ರವೇಶ ನೀಡಬಹುದೆಂದು ಹಕ್ಕು ಚಲಾಯಿಸುವಂತಿಲ್ಲ. ಅಷ್ಟು ಪ್ರಮಾಣದ ಸ್ಥಾನಗಳನ್ನು ಖಾಲಿ ಬಿಟ್ಟು ಉಳಿದ ಸ್ಥಾನಗಳನ್ನು ತುಂಬುವುದು. ನಂತರ ಈ ವಿಷಯದಲ್ಲಿ ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸಲ್ಲಿಸಿ ಮುಂದಿನ ಕ್ರಮದ ಬಗ್ಗೆ ಅನುಮೋದನೆ ಪಡೆಯತಕ್ಕದ್ದು.

2) ಪರಿಶಿಷ್ಟ ಜಾತಿ (ಎಸ್.ಸಿ), ಪರಿಶಿಷ್ಟ ಪಂಗಡ (ಎಸ್.ಟಿ) ಮತ್ತು ಪ್ರವರ್ಗ–1 ಹಾಗೂ ಗ್ರಾಮೀಣ ಗುಂಪಿನ ಸೌಲಭ್ಯಕ್ಕೆ ಕರ್ನಾಟಕ ಅಭ್ಯರ್ಥಿಗಳು ಮಾತ್ರ ಅರ್ಹರಾಗಿರುತ್ತಾರೆ.

**6. ಅರ್ಹತಾ ಪತ್ರ:– (Eligibility Certificate)**

ಕರ್ನಾಟಕದಲ್ಲಿ 02 ವರ್ಷಗಳ ಐ.ಟಿ.ಐ ವ್ಯಾಸಂಗ ಮಾಡಿದ ಅಭ್ಯರ್ಥಿಗಳು ಸಿಬಿಎಸ್ಇ, ಐಸಿಎಸ್ಇ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾದ ಅಭ್ಯರ್ಥಿಗಳು ಹಾಗೂ ಹೊರ ರಾಜ್ಯದಲ್ಲಿ ಎಸ್.ಎಲ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಡಿಪ್ಲೋಮಾ ಪ್ರವೇಶಕ್ಕೆ ಅರ್ಹತೆ ಇರುವ ಸಂಬಂಧದಲ್ಲಿ **ಕಾರ್ಯದರ್ಶಿಯವರು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು**–560 001 ಇವರು ನಿಗಧಿತ ಅವಧಿಯೊಳಗೆ ಅರ್ಹತಾ ಪತ್ರವನ್ನು ನೀಡಿರುವ ಬಗ್ಗೆ ಖಚಿತ ಪಡಿಸಿಕೊಂಡು ಪ್ರವೇಶ ನೀಡುವುದು. ಇಂತಹ ಅಭ್ಯರ್ಥಿಗಳ ಅರ್ಹತಾ ಪತ್ರವಿಲ್ಲದ ಪ್ರವೇಶವನ್ನು ನಿಯಮಗಳ ಪ್ರಕಾರ ಪರಿಗಣಿಸಲಾಗುವುದಿಲ್ಲ.

**7. ಶುಲ್ಕ ನಿಗಧಿ ಬಗ್ಗೆ:–**

ಸರ್ಕಾರದ ಆದೇಶಗಳ ಸಂಖ್ಯೆ. ಇಡಿ 119 ಟಿಪಿಇ 2005, ದಿನಾಂಕ:18–10–2005 ಹಾಗೂ ಇಡಿ 10 ಟಿಪಿಇ 2012, ದಿನಾಂಕ:29–05–2012 ರನ್ವಯ ಸರ್ಕಾರಿ, ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ಅನ್ವಯವಾಗುವಂತೆ ಕೆಳಕಂಡ ಶುಲ್ಕವನ್ನು ನಿಗಧಿಪಡಿಸಲಾಗಿದೆ. ಇದಲ್ಲದೆ ಯಾವುದೇ ರೀತಿಯ ಕ್ಯಾಪಿಟೇಷನ್ ಶುಲ್ಕ, ಹೆಚ್ಚಿನ ದೇವಣಿ ಅಥವಾ ಶುಲ್ಕವನ್ನು ವಸೂಲಿ ಮಾಡಿದ ಬಗ್ಗೆ ದೂರು ಬಂದಲ್ಲಿ ಅಂತಹ ಪಾಲಿಟೆಕ್ನಿಕ್‌ನ ಮೇಲೆ ನಿಯಮಗಳ ಪ್ರಕಾರ ಸೂಕ್ತ ಕ್ರಮ ಜರುಗಿಸಿ, ಸರ್ಕಾರಕ್ಕೆ ವರದಿ ಮಾಡಲಾಗುವುದು.

| ಕ್ರ. ಸಂ. | ಪಾಲಿಟೆಕ್ನಿಕ್ | ಬೋಧನಾ ಶುಲ್ಕ | ಅಭಿವೃದ್ಧಿ ಶುಲ್ಕ | ಇತರೆ ಶುಲ್ಕ | ಒಟ್ಟು |
|---|---|---|---|---|---|
| 1. | ಖಾಸಗಿ ಪಾಲಿಟೆಕ್ನಿಕ್ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ ಅನುದಾನರಹಿತ ಕೋರ್ಸುಗಳಿಗೆ (ಕರ್ನಾಟಕ ಅಭ್ಯರ್ಥಿಗಳಿಗೆ) | ₹ 9,450/- | ₹ 500/- | ₹ 800/- | ₹ 10,750/- |

**8. ಪ್ರವೇಶಕ್ಕೆ ನಿಗಧಿಪಡಿಸಿರುವ ಅಂತಿಮ ದಿನಾಂಕ:–**

ಕರ್ನಾಟಕ ಸರ್ಕಾರ ಹಾಗೂ ಎಐಸಿಟಿಇಯಿಂದ ಮಾನ್ಯತೆ ಪಡೆದ ರಾಜ್ಯದಲ್ಲಿನ ಎಲ್ಲಾ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಡಿಪ್ಲೋಮಾ ಕೋರ್ಸಿಗೆ **ದಿನಾಂಕ: 29-06-2013** ರವರೆಗೆ ಪ್ರವೇಶ ಮಾಡಿಕೊಳ್ಳುವ ಅವಕಾಶ ನೀಡಲಾಗಿದೆ. ಪ್ರಯುಕ್ತ, ಮೇಲ್ಕಂಡ ದಿನಾಂಕದೊಳಗೆ ಪ್ರವೇಶವನ್ನು ಮುಗಿಸುವ ವ್ಯವಸ್ಥೆ ಮಾಡಿಕೊಳ್ಳುವುದು.

ಇಲಾಖೆಯ ಸುತ್ತೋಲೆಯಲ್ಲಿ ತಿಳಿಸಿರುವ ಸಾಮಾನ್ಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಪ್ರವೇಶ ನೀಡತಕ್ಕದ್ದು. ನಿಯಮಗಳನ್ನು ಉಲ್ಲಂಘಿಸಿ ಪ್ರವೇಶ ಮಾಡಿದಂತಹ ಸಂದರ್ಭಗಳಿಗೆ ಆಯಾ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿ ಹಾಗೂ ಪ್ರಿನ್ಸಿಪಾಲರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

**9. ಶೈಕ್ಷಣಿಕ ಕಾರ್ಯಕ್ರಮ:-**

ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ವತಿಯ ಶೈಕ್ಷಣಿಕ ವೇಳಾಪಟ್ಟಿ ಕಾರ್ಯಕ್ರಮದನ್ವಯ ಪಾಠಪ್ರವಚನಗಳನ್ನು ನಿಗಧಿಪಡಿಸಿದ ಅವಧಿಯ ಒಳಗೆ ಮುಗಿಸುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳತಕ್ಕದ್ದು.

**ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ನಿಯಮಗಳನ್ವಯ ಸಂಬಂಧಿಸಿದ ಪರೀಕ್ಷೆಗೆ ಹಾಜರಾಗಲು ಕೆಳಕಂಡಂತೆ ಕನಿಷ್ಠ ಹಾಜರಾತಿ ಇರಬೇಕಾಗುತ್ತದೆ.**

**1) ಪ್ರತಿ ವಿಷಯದಲ್ಲಿ ಇರಬೇಕಾದ ಕನಿಷ್ಠ ಹಾಜರಾತಿ (ಪ್ರತಿಶತ) – 75**

**2) ವೈದ್ಯಕೀಯ ಆಧಾರದ ಮೇಲೆ ಹಾಜರಾತಿಯಲ್ಲಿ ಶೇ. 15 ರಷ್ಟು ವಿನಾಯ್ತಿ ನೀಡಿದಲ್ಲಿ ಇರಬೇಕಾದ ಕನಿಷ್ಠ ಹಾಜರಾತಿ (ಪ್ರತಿಶತ) – 60**

**ಮೇಲ್ಕಂಡ ಕನಿಷ್ಠ ಹಾಜರಾತಿ ಇಲ್ಲದ ಅಭ್ಯರ್ಥಿಯು ಮುಂದಿನ ತರಗತಿಗೆ ಹಾಗೂ ಸಂಬಂಧಿಸಿದ ಪರೀಕ್ಷೆಗೆ ಹಾಜರಾಗಲು ಅವಕಾಶವಿರುವುದಿಲ್ಲ.**

**10. ಆಯ್ಕೆ ಪಟ್ಟಿ ಹಾಗೂ ದಾಖಲಾತಿಗಳನ್ನು ಸಲ್ಲಿಸುವ ಬಗ್ಗೆ:-**

2013-14ನೇ ಸಾಲಿನಲ್ಲಿ ಪ್ರವೇಶ ಹೊಂದಿದ ಅಭ್ಯರ್ಥಿಗಳ ಮಾಹಿತಿಯನ್ನು ನಿಗಧಿತ ನಮೂನೆಯಲ್ಲೇ ಭರ್ತಿಮಾಡಿ ತ್ರಿಪ್ರತಿಯೊಂದಿಗೆ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ನಿಗಧಿಪಡಿಸುವ ಅಂತಿಮ ದಿನಾಂಕದ ಒಳಗೆ ಸಂಬಂಧಿಸಿದ ದಾಖಲೆಗಳೊಂದಿಗೆ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸತಕ್ಕದ್ದು. ಪ್ರವೇಶಾನುಮೋದನೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸುತ್ತೋಲೆಯನ್ನು ಕಳುಹಿಸಲಾಗುವುದು.

ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ ಸಕಾಲದಲ್ಲಿ ಪಾಠಪ್ರವಚನಗಳನ್ನು ಹಾಗೂ ಪ್ರಾಯೋಗಿಕ ತರಬೇತಿಯನ್ನು ಮುಗಿಸಬೇಕಾಗಿರುತ್ತದೆ. ಪ್ರಯುಕ್ತ, ನಿಗಧಿತ ಅವಧಿಯೊಳಗೆ ಪ್ರವೇಶವನ್ನು ಮುಗಿಸಿ ಶೈಕ್ಷಣಿಕ ವೇಳಾಪಟ್ಟಿಯನ್ವಯ ಪಾಠಪ್ರವಚನಗಳನ್ನು ಮತ್ತು ಪ್ರಾಯೋಗಿಕ ತರಬೇತಿಯನ್ನು ಮುಗಿಸುವಲ್ಲಿ ವ್ಯವಸ್ಥಿತ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕೆಂದು ತಿಳಿಸಲಾಗಿದೆ.

ಕರ್ನಾಟಕದ ಆಡಳಿತ ಭಾಷೆ ಕನ್ನಡವಾಗಿರುವುದರಿಂದ, ಎಲ್ಲಾ ಪತ್ರ ವ್ಯವಹಾರಗಳನ್ನು ಕನ್ನಡದಲ್ಲೇ ಮಾಡುವುದು.

ನಿರ್ದೇಶಕರು

*ಎಲ್ಲಾ ಖಾಸಗಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ-ಮಾಹಿತಿಗಾಗಿ ಮತ್ತು ಸೂಕ್ತ ಅನುಸರಣೆಗಾಗಿ*

**ಪ್ರತಿ:-**

1. ಕಾರ್ಯದರ್ಶಿಯವರು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು. – **ದಿ: 29-06-2013ರ** ಒಳಗೆ ಹೊರರಾಜ್ಯದ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ ವಿತರಿಸುವ ಬಗ್ಗೆ ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

2. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ
4. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ.
5. ನಿರ್ದೇಶಕರವರ ಆಪ್ತ ಶಾಖೆಗೆ
6. ಸಂಯೋಜನಾಧಿಕಾರಿಗಳು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು – ಸದರಿ ಪ್ರವೇಶಾಧಿಸೂಚನೆಯನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
7. ಆರ್.ಡಿ.ಎಂ(1) ರಿಂದ (14)ರ ವರೆಗಿನ ವಿಭಾಗಗಳಿಗೆ.
8. ಮೇಲ್ಕಂಡ ಅವಧಿಯ ಒಳಗೆ ಅರ್ಹತಾ ಪ್ರಮಾಣ ಪತ್ರ ನೀಡುವ ಸಂಬಂಧ ಕಛೇರಿ ವೇಳೆಯಲ್ಲಿ ಶುಲ್ಕವನ್ನು ಸ್ವೀಕರಿಸಿ ನಿಗಧಿತ ಲೆಕ್ಕ ಶೀರ್ಷಿಕೆಗೆ ಜಮಾ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಕೆಳಕಂಡ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ತಿಳಿಸಲಾಗಿದೆ.

   - ಪ್ರಿನ್ಸಿಪಾಲರು, ಸರ್ಕಾರಿ ತಾಂತ್ರಿಕ ಮುದ್ರಣ ಸಂಸ್ಥೆ, ಬೆಂಗಳೂರು – ಸೋಮವಾರ
   - ಸರ್ಕಾರಿ ಎಸ್.ಆರ್.ಸಿ. ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಬೆಂಗಳೂರು – ಮಂಗಳವಾರ & ಬುಧವಾರ.
   - ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು – ಗುರುವಾರ.
   - ಜಿಆರ್‌ಐಸಿಪಿ, ಬೆಂಗಳೂರು – ಶುಕ್ರವಾರ.
   - ಸರ್ಕಾರಿ ಜವಳಿ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು (ಐಟಿಟಿ) – ಶನಿವಾರ.
9. ಕಛೇರಿ ಪ್ರತಿ